ಗುಟುಕರಿಸುತ್ತಲೇ ಹತ್ತು ನಿಮಿಷದಲ್ಲಿ ಪೆಂಚಾಲಯ್ಯನ ಡೇಟ್ ಆಫ್ ಬರ್ತ್ ಚರಿತ್ರೆಯನ್ನು ಬಿಚ್ಚಿಟ್ಟಿದ್ದ. ದೇವೇಗೌಡ ಹೇಳುತ್ತಿದ್ದರೆ ಪೆಂಚಾಲಯ್ಯ ಮುದುಡಿ ಕುಳಿತಿದ್ದ. ಗ್ಲಾಸನ್ನು ಖಾಲಿ ಮಾಡಿ ಬಿಸಿಬಿಸಿ ಚಿಲ್ಲಿ ಪೋರ್ಕ್ ಪೀಸನ್ನು ಬಾಯಿಗಿಟ್ಟುಕೊಂಡು, "ಯಾವ್ ಸುವ್ವರ್ ನನ್ಮಗಾನ್ರಿ ಹುಟ್ಟಿದ ದಿನಾಂಕ ಬರ್ದೋನು. ಸರಿ ಅವ್ನೇನೋ ಕೆಟ್ಟ ತಿಕ್ಕಲು ಗ್ಯಾನದಲ್ಲಿ ಬರ್ದ ಅಂತಿಟ್ಕಳಿ. ಈ ಎಸ್ಸೆಸ್ಸೆಲ್ಸಿ ಬೋರ್ಡ್, ಪಿಯುಸಿ ಬೋರ್ಡ್, ಯೂನಿವರ್ಸಿಟಿ ದನ್ಗಳ್ರುಗ್ಳೇನು ಕತ್ತೆ ಕಾಯ್ತಿದ್ರೇನ್ರಿ. ಈ ಗೌರ್ಮೆಂಟ್ ಸರ್ವೆಂಟ್ಸೇ ಹಂಗೆ, ಪ್ರತಿಯೊಬ್ರೂ ನೆತ್ತಿಯಿಂದ ಪಾದದವರ್ಗೂ ಚೆನ್ನಾಗಿ ಹರಳೆಣ್ಣೆ ಉಜ್ಜಿಕೊಂಡೇ ಆಫೀಸ್ಗೆ ಬರ್ತಾರೆ. ಇರ್ಲಿ, ಒಂದು ಪ್ಲಾನ್ ಮಾಡ್ಕೋಣ. ಎಸ್ಸೆಸ್ಸೆಲ್ಸಿ ಬೋರ್ಡ್‌ನಲ್ಲಿ ಏನಾದ್ರೂ ಮಾರ್ಕ್ಸ್ ಕಾರ್ಡ್‌ನಲ್ಲಿ ಡೇಟ್ ಆಫ್ ಬರ್ತ್ ತಿದ್ದುಪಡಿ ಮಾಡಿಕೊಟ್ರೆ ಕಮಿಷನರ್ಗೆ ಅಡಿಷನಲ್ ಕಮಿಷನರ್ ಕನ್ವಿನ್ಸ್ ಮಾಡಿದ್ರೆ ಸರಿಹೋಗ್ತದೇನೋ ನೋಡ್ಕೋಣ. ಎಸ್ಸೆಸ್ಸೆಲ್ಸಿ ಬೋರ್ಡ್‌ನಲ್ಲಿ ಎಕ್ಸಾಮಿನೇಷನ್ ಸೆಕ್ಷನ್ನಲ್ಲಿ ರವಿ ನಾಯಕ್ ಅಂತ ನನ್ನ ಫ್ರೆಂಡ್ ಒಬ್ಬ ಇದಾನೆ. ನಾಳೆ ಹೋಗಿ ಅವನ್ನ ಕಂಡು ಬರ್ರಿ. ನೋಡ್ಕಂಡು ಆಮೇಲೆ ಒಂದು ಪ್ಲಾನ್ ಮಾಡಾನ. ಕೆಸಿಎಸ್‌ಆರ್‌ನಲ್ಲಿ ತಪ್ಪಿಗೆ ಯಾವುದಾದರೊಂದು ಪರಿಹಾರ ಇದ್ದೇ ಇರ್ತದೆ. ಅದೂ ಆಗ್ಲಿಲ್ಲ ಅಂದ್ರೆ ಟ್ರಿಬ್ಯುನಲ್ ಇದ್ದೇ ಇದ್ಯಲ್ಲ. ಅಪೀಲ್ ಹೋದ್ರೆ ಒಂದಾರ್ತಿಂಗ್ಳಲ್ಲಿ ಎಲ್ಲಾ ಸೆಟ್ಲಾಗೋಗ್ತೈತೆ." ಎಂದು ಹೇಳಿದ್ದ ಮಾಳಿಗಚಾರ್. ಡ್ರಿಂಕ್ಸ್ ಮುಗಿಸಿ ಪೋರ್ಕ್ ತಿಂದು ಏಳುವಾಗ ಏಳೂವರೆ ಗಂಟೆಯಾಗಿತ್ತು. ಸಾವಿರದ ಆರುನೂರು ರೂಪಾಯಿ ಬಿಲ್ಲನ್ನು ಪೆಂಚಾಲಯ್ಯನೇ ಸುಲಭವಾಗಿ ಎತ್ತಿ ಜೇಬಿನ ಭಾರವನ್ನು ಕಡಿಮೆ ಮಾಡಿಕೊಂಡಿದ್ದ. ಆದರೆ, ಮನಸ್ಸಿನ ಭಾರ ಇನ್ನೂ ಇಳಿದಿರಲಿಲ್ಲ. ಬಾರ್ ಮಹಡಿಯಿಂದ ಕೆಳಗಿಳಿದು ಫುಟ್‌ಪಾತ್‌ಗೆ ಬಂದಾಗ ಟ್ಯಾಂಕ್ ಬಂಡ್ ರಸ್ತೆ ಜೀವಕಳೆ ತುಂಬಿಕೊಂಡು ಕಂಗೊಳಿಸುತ್ತಿತ್ತು. ಜಠರದಲ್ಲಿ ತುಂಬಿದ್ದ ಬಿಯರ್ ನರನಾಡಿಗಳ ಮೂಲಕ ಮೆದುಳಿಗೆ ಧೈರ್ಯದ ತಂತುಗಳನ್ನು ರವಾನಿಸಿದ್ದರಿಂದ ಪೆಂಚಾಲಯ್ಯ ಬಹಳ ಲಹರಿಯಿಂದಲೇ ಸ್ಕೂಟರನ್ನು ಹತ್ತಿ ಸ್ಟಾರ್ಟ್ ಮಾಡಿಕೊಂಡು ಮೆಜೆಸ್ಟಿಕ್‌ನ ಲಕ್ಷಾಂತರ ನಡೆದಾಡುವ ನೆರಳುಗಳಲ್ಲಿ ಮಾಯವಾಗಿದ್ದ.

ಮಾರನೆಯ ದಿನ ಸಂಜೆ ನಾಲ್ಕು ಗಂಟೆಗೆ ಸೀನಿಯರ್ ಆಫೀಸರ್ ಪರ್ಮಿಶನ್ ತೆಗೆದುಕೊಂಡು ಪೆಂಚಾಲಯ್ಯ ಮತ್ತು ದೇವೇಗೌಡ ಎಸ್ಸೆಸ್ಸೆಲ್ಸಿ ಬೋರ್ಡ್ ಎಕ್ಸಾಮಿನೇಷನ್ ಸೆಕ್ಷನ್ನಿನ ರವಿ ನಾಯಕ್ ಟೇಬಲ್ ಮುಂದೆ ನಿಂತಿದ್ದರು. ಪಕ್ಕದಲ್ಲಿದ್ದ ಕ್ಯಾಂಟೀನಿನಲ್ಲಿ ಟೀ ಕುಡಿಯುವ ಹೊತ್ತಿಗೆ ರವಿ ನಾಯಕನಿಗೆ ದೇವೇಗೌಡ ವಿಷಯವನ್ನು ವಿವರಿಸಿದ್ದ. ಸಿಗರೇಟ್ ಹಚ್ಚಿಕೊಂಡು ರವಿ ನಾಯಕ,

"ನೋಡಿ ಸಾರ್, ಅಫಿಡವಿಟ್ ಮಾಡಿಸಿ ಹೆಸರನ್ನು ಬದಲಾಯಿಸಿಕೊಳ್ಳಬಹುದು. ಅಫಿಡವಿಟ್ ಮೇಲೆ ಹುಟ್ಟಿದ ದಿನಾಂಕವನ್ನು ನಿರ್ಧಾರ ಮಾಡುವ ಕಾಲ ಬಹಳ ಹಿಂದೆ ಅಂದರೆ ನಲವತ್ತು ವರ್ಷಗಳ ಹಿಂದೆ ನಡಿತಿತ್ತು. ಈಗೇನಾದ್ರೂ ಅಂತಹ ಸ್ಪೆಷಲ್ ಪ್ರಾವಿಷನ್ ಕೊಟ್ರೆ ಈಗ ಸರ್ಕಾರಿ ನೌಕರಿಯಲ್ಲಿರೋರು ಸಾಯೋಗಂಟ ಯಾರೂ ರಿಟೈರ್ ಆಗೋದಿಲ್ಲ. ಎಸ್ಸೆಸ್ಸೆಲ್ಸಿ ಮಾರ್ಕ್ಸ್ ಕಾರ್ಡ್ ಒಂಥರಾ ನಾಗರಹಾವು ಇದ್ದಂಗೆ ಸಾರ್, ಮುಟ್ಟಿದ್ರೆ ಸಾಕು ಕಚಕ್ನೆ ಕಚ್ಚಿಬಿಡ್ತದೆ. ಬೇಕಾದ್ರೆ ಒಂದು ಮನವಿ ಪತ್ರ ಕೊಡಿ, ಡೈರೆಕ್ಟರ್ ಮುಂದೆ ಹೋಗ್ತದೆ, ಅವ್ರೇನು ತೀರ್ಮಾನ ತಗೋತಾರೋ ಅದೇ ಫೈನಲ್. ನಂಗೆ ತಿಳ್ದಂಗೆ ಇಂಥ ಕೇಸ್ನ ನನ್ನ ಸರ್ವೀಸಿನಲ್ಲೆ ಕಂಡಿಲ್ಲ. ಡೈರೆಕ್ಟ್ರು ಕೂಡಾ ರಿಸ್ಕ್ ತೊಗೊಳೊದಿಲ್ಲ ಅನ್ನುತ್ತೆ. ಒಂದ್ವೇಳೆ ಇಲ್ಲಿ ತಿದ್ದುಪಡಿ ಮಾಡಿಕೊಟ್ರೂ ಇದನ್ನ ನಿಮ್ಮ ಕಮಿಷನರ್ ಒಪ್ಕೊತಾರೆ ಅನ್ನೊದೇನು ಗ್ಯಾರಂಟಿ. ಏಕೆಂದರೆ, ನಿಮ್ಮ ಮೂವತ್ಮೂರು ವರ್ಷಗಳ ಸರ್ವೀಸ್ ರಿಜಿಸ್ಟರ್ನ್ ತಿದ್ದುಪಡಿ ಮಾಡ್ಬೇಕಾಗ್ತದ. ಈ ಐಎಎಸ್ ಆಫೀಸರ್ರುಗ್ಳು ಒಂಥರ ಗ್ಯಾನ್ ಬಂದ ಗಿರಾಕಿಗಳಿದ್ದಂಗೆ. ನಿಮ್ಮ ಕಮಿಷನರೊಬ್ರು ಮನಸ್ಸು ಮಾಡಿದ್ರೆ ಅಲ್ಲೆ ಅದುಕ್ಕೊಂದು ದಾರಿ ತೋರಿಸಿ ಈಸಿಯಾಗಿ ಸೆಟ್ಲ್ ಮಾಡಬಹುದು. ಎಲ್ಲಾ ಹಣೆಬರಹ ಸಾರ್. ನಾನೇ ತಗಳಿ, ಇಸ್ಟ್ರಿ ಎಂ.ಎ. ಸೆಕೆಂಡ್